


**ಎಡದಿಂದ ಬಲಕ್ಕೆ:**

1. ಈ ವಿಧಾನದಲ್ಲಿ ಸಾಧಿಸಲು ತಾಳ್ಮೆ ಇರಲಿ (4)
3. ಅವನ ಸಹವಾಸದ ಬಗೆಗೆ ಏನೋ ಅನುಮಾನ (3)
4. ನವಿಲಿನ ಬಣ್ಣಗಳೆಲ್ಲ ಇಲ್ಲಿ ಬೆರೆತಿವೆ (3)
6. ಹೆಸರುಗಳ ಸಂಖ್ಯೆ ಹತ್ತು ನೂರಾರು (4)
7. ಸೇವೆಯನು ನಲಿಸುವ ಪ್ರಾಯವೇ? (3)
9. ಖಜಾನೆಯ ರಕ್ಷಕ ಅವನ ತಂದೆ (3)
11. ಇಂಥ ಮನೆಯನ್ನು ನಿರ್ಮಿಸಿದವಗೆ ವಂದನೆ (3)
13. ಕೇಳಿದವರಿಗೆಲ್ಲ ಇಲ್ಲಿ ಊಟ (3)
15. ಕರೆಸಿದೊಡನೇ ಹಾಜರು ಸರದಾರನ ಸೇವಕ (4)
17. ತವರ ತರುವ ಕೆಲಸ– ಬೇಗ (3)
18. ಹತ್ತೆಣಿಸುವುದರೊಳಗೆ ತನ್ನಿ ದೀಪ (3)
19. ರಾಜ್ಯವನ್ನಾಳುವವರಿಗೆ ಇದೆಂಥ ಗುಣ? (4)

**ಮೇಲಿಂದ ಕೆಳಕ್ಕೆ:**

1. ಸಹಸ್ರ ಮೆಟ್ಟಿಲುಗಳನ್ನೇರಿದ್ದೇ ಪರಾಕ್ರಮವೇ? (3)
2. ನಾವಿರುವ ಪರಿಸರ ತುಂಬ ಸೂಕ್ಷ್ಮ (3)
3. ಸಂಜೆಯ ವೇಳೆಗೆ ಎಲ್ಲ ಸಂಗ್ರಹ (3)
5. ನೋವನ್ನು ಹೋಗಿಸುವ ಮದ್ದು, ಹೊಸದು (3)
7. ರಾಜ ನಿವಾಸವನ್ನು ಪ್ರವೇಶಿಸಲು ತಕ್ಕ ಉಡುಪು (3)
8. ಮನಸಿನ ತುಂಬ ಹಿಗ್ಗು, ಸಂತಸ (3)
9. ಕಾಳಜಿ ಇದ್ದರೆ ಮೊದಲು ಸ್ನಾನ ಆಗಲಿ (3)
10. ಕೇಳರಿಯದ ಕೃತ್ಯ– ಎಷ್ಟು ಘೋರ (3)
12. ಮತ ಹಾಕುವ ಕೆಲಸ– ತುಂಬ ಪ್ರಾಮುಖ್ಯ (3)
14. ಎಷ್ಟು ವಿನೀತೆ ನೋಡಿ ಆ ಮಹಿಳೆ (3)
15. ತಕ್ಕವರನ್ನು ಹುಡುಕುವ ಆತುರ ಅವಸರ (3)
16. ಹರಣವಾಗಿದ್ದನ್ನೆಲ್ಲ ಅಲ್ಲೇ ಬಿಟ್ಟುಹೋಗುವುದೇ? (3)

## ಪದಬಂಧ: 22-4-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅವಯವ; 3. ಪ್ರಣವ; 4. ಜೀವನ; 6. ನಿರಾಧಾರ; 7, ಮಾರಕ; 9. ಕಾನನ; 11. ಕವಿತ; 13. ನವೀನ; 15. ತಾರಾಲೋಕ; 17. ಗಮಾರ; 18. ರಾಜಿಸು; 19. ಕಪ್ಪುಕರು.

ಮೇಲಿಂದ ಕೆಳಕ್ಕೆ:

1. ಅವನಿ; 2. ವಜೀರ; 3. ಪ್ರಹಾರ; 5. ನಳಿನ; 7. ಮಾನಸಿಕ; 8. ಕಲಂಕಿತ; 9. ಕಾರಕೂನ; 10. ನವಮಾನ; 12. ವಿರಾಗ; 14. ವೀಕ್ಷಿಸು; 15. ತಾರಕ; 16. ಕರಾರು.

# ನಿಧಿ ವಿಶೇಷ

## ರತ್ನಗಳಲ್ಲಿ ಎಷ್ಟು ಬಗೆ?

ರತ್ನ. ಅದು ಧರೆಯ ಒಡಲಿನ ಒಂದು ಅತ್ಯಮೂಲ್ಯ ನಿಧಿ. ಗಟ್ಟಿತನ, ಅತಿ ವಿರಳ ಲಭ್ಯತೆ ಮತ್ತು ಅನುಪಮ ಸೌಂದರ್ಯ– ಈ ಮೂರೂ ಗುಣಗಳಿಂದಾಗಿ ರತ್ನಗಳಿಗೆ ಬಹಳ ಬೆಲೆ, ಅತೀವ ಬೇಡಿಕೆ.

ಅವೆಲ್ಲ ಏನೇ ಇದ್ದರೂ ವೈಜ್ಞಾನಿಕವಾಗಿ ರತ್ನಗಳೂ ಖನಿಜಗಳ ಗುಂಪಿಗೇ ಸೇರಿವೆ. ವಾಸ್ತವ ಏನೆಂದರೆ ಭೂಮಿಯಲ್ಲಿ ಈವರೆಗೆ ಗುರುತಿಸಿರುವ ಹೆಸರಿಸಲಾಗಿರುವ ಖನಿಜಗಳ ಸಂಖ್ಯೆ ಸುಮಾರು ನಾಲ್ಕುಸಾವಿರ. ಆದರೆ ರತ್ನಗಳ ಸಂಖ್ಯೆ ಮಾತ್ರ ಒಂದು ನೂರಕ್ಕೂ ಕಡಿಮೆ– ಸಮೀಪ ಎಪ್ಪತ್ನಾಲ್ಕು ಮಾತ್ರ. ಅವುಗಳಲ್ಲೂ ಅತ್ಯುತ್ಕೃಷ್ಟ ಶ್ರೇಷ್ಠ ರತ್ನ ವಿಧಗಳ ಸಂಖ್ಯೆ ಹತ್ತು–ಹದಿನೈದು ಅಷ್ಟೆ!

ಪಾರಂಪರಿಕವಾಗಿ ಪ್ರಸಿದ್ಧವಾಗಿರುವ ರತ್ನಗಳು ಇವು: 'ವಜ್ರ, ರೂಬಿ (ಮಾಣಿಕ್ಯ ಅಥವಾ ಕೆಂಪು), ಸಫೈರ್ (ನೀಲ), ಎಮರಾಲ್ಡ್ (ಪಚ್ಚೆ) ಮತ್ತು ಓಪಾಲ್ (ಕ್ಷೀರ ಸ್ಫಟಿಕ)'. ಈ ಪೈಕಿ ಸಫೈರ್‌ನಲ್ಲೇ ಮೂರು ವಿಧಗಳಿವೆ: 'ನೀಲಿ ಸಫೈರ್, ಹಸಿರು ಸಫೈರ್ ಮತ್ತು ಹಳದಿ ಸಫೈರ್.'



ಇತರ ಪ್ರಸಿದ್ಧ ರತ್ನ ವಿಧಗಳು: ಟೋಪಾಜ್, ಅಕ್ವಾಮೆರೈನ್, ಗಾರ್ನೆಟ್ ಮತ್ತು ಟೂರ್ಮಲೀನ್.

ಅಲಂಕಾರಿಕ ಖನಿಜಗಳು: 'ಜಾಸ್ಪರ್, ಆನಿಕ್ಸ್, ಅಗೇಟ್, ಅಮೆಥಿಸ್ಟ್, ಜೇಡ್, ಮ್ಯಾಲಕೈಟ್, ರ್ಹೋಡೋನೈಟ್ ಮತ್ತು ಲ್ಯಾಪಿಸ್ ಲಜೂಬಿ'. ವಿಶೇಷ ಏನೆಂದರೆ ಸಫೈರ್‌ನಲ್ಲಿರುವಂತೆ ವಜ್ರವೂ ಸೇರಿದಂತೆ ಈ ಗುಂಪಿನ ಕೆಲವಾರು ರತ್ನಗಳು ಬೇರೆ ಬೇರೆ ಬಣ್ಣಗಳಲ್ಲೂ ದೊರಕುತ್ತವೆ. ಅಷ್ಟೇ ಅಲ್ಲದೆ ಖನಿಜಗಳೇ ಅಲ್ಲದ ಜೀವಿಮೂಲದ ಇವೆ: 'ಮುತ್ತು, ಹವಳ ಮತ್ತು ಆ್ಯಂಬರ್' ಕೇವಲ ವಿರಳತೆ ಮತ್ತು ದಿವ್ಯ ಸೌಂದರ್ಯದಿಂದಾಗಿ ಇವು ರತ್ನಗಳ ಪಟ್ಟಿಯನ್ನು ಸೇರಿವೆ.

ಇಲ್ಲೊಂದು ಮುಖ್ಯ ವಿಷಯ: ವಾಸ್ತವವಾಗಿ ವಜ್ರವೂ ಸೇರಿದಂತೆ ನೆಲದಲ್ಲಿ ಸಿಗುವಾಗಲೇ ಯಾವುದೇ ರತ್ನವೂ ಆಕರ್ಷಕ ರೂಪವನ್ನೂ, ನಕ್ಷತ್ರ ಕಾಂತಿಯನ್ನೂ ಅವುಗಳ ಆಂತರ್ಯದ ವರ್ಣವೈಭವವನ್ನೂ ಪ್ರದರ್ಶಿಸುವುದಿಲ್ಲ. ನೆಲದಲ್ಲಿ ಲಭಿಸಿದ ಹರಳುಗಳನ್ನು ಕುಶಲಕರ್ಮಿಗಳು ಸಾಣೆ ಹಿಡಿದ ನಂತರವಷ್ಟೇ ಅವು ಕಂಗೊಳಿಸುತ್ತವೆ. ಇನ್ನೂ ವಿಶೇಷ ಏನೆಂದರೆ ರೂಬಿ ಮತ್ತು ಸಫೈರ್‌ಗಳ ಎಲ್ಲ ವಿಧಗಳೂ ನೆಲದಿಂದ ತೆಗೆದಾಗ ಪೇಲವ ವರ್ಣ ಹೊಂದಿರುತ್ತವೆ. ವಿಶೇಷ ಕುಲುಮೆಗಳಲ್ಲಿ ಎರಡು– ಮೂರು ಸಾವಿರ ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಹಲವು ತಾಸುಗಳ ಕಾಲ ಕಾಯಿಸಿದ ನಂತರವಷ್ಟೇ ಅವು ಉಜ್ವಲ ವರ್ಣ ಪಡೆಯುತ್ತವೆ.



■ ಎನ್. ವಾಸುದೇವ್